**ಸಮಗ್ರ ಶಿಕ್ಷಣ-ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾ.ಶಿ.ಇ. ಆಯುಕ್ತರ ಕಛೇರಿಯ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೧**

ಸಂಖ್ಯೆ: ಸ.ಶಿ.ಕ/ಆ.ಚ.02/ಇಕೋ ಕ್ಲಬ್ ಕಾರ್ಯಕ್ರಮ/2019-20 ದಿನಾಂಕ: 14.09.2020

**ಸುತ್ತೋಲೆ**

ವಿಷಯ: "2020-21ನೇ ಸಾಲಿನಲ್ಲಿ ರಾಷ್ಟ್ರೀಯ ಹಸಿರುಪಡೆ" ಕಾರ್ಯಕ್ರಮದಡಿಯಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ರೂ.5000/- ಇಕೋ ಕ್ಲಬ್ ಅನುದಾನವನ್ನು ಬಳಸಿಕೊಂಡು ಚಟುವಟಿಕೆಗಳನ್ನು ಕೈಗೊಳ್ಳಲು ಹಾಗು ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ನೀಡುವ ರೂ.25000/-ಗಳ ಬಳಕೆಯ ಕುರಿತು.

ಉಲ್ಲೇಖ: ಮಹಾನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಇವರ ಕಛೇರಿ ಪತ್ರ ಸಂಖ್ಯೆ: ಎಂಪ್ರಿ/ಸಿಆರ್ 11/ಎಸ್‌ಜಿಸಿ/2020-21/405 ದಿ: 17.08.2020.

******

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ರಾಜ್ಯದ 17000 ಇಕೋಕ್ಲಬ್ ಶಾಲೆಗಳಿಗೆ ರೂ.5,000/- ವಾರ್ಷಿಕ ಅನುದಾನ ಹಾಗೂ 34 ಶೈಕ್ಷಣಿಕ ಜಿಲ್ಲೆಗಳಿಗೆ ರೂ.25,000/- ಅನುದಾನವನ್ನು ವರ್ಗಾವಣೆ ಮಾಡಲಾಗಿದ್ದು, ಕೋವಿಡ್-19ರ ಕಾರಣದಿಂದಾಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ತರಗತಿಗಳು ನಡೆಯದೆ ಇರುವುದರಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಪರಿಸರಕ್ಕೆ ಸಂಬಂಧಿಸಿದ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಕೋವಿಡ್-19ನ ಪರಿಸ್ಥಿಯ ಗಂಭೀರತೆಯನ್ನು ಅರಿತು ಲಭ್ಯ ಅನುದಾನವನ್ನು ಶಾಲೆ ಹಾಗೂ ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಖರ್ಚು ಭರಿಸುವುದು.

**ಶಾಲಾ ಮಟ್ಟ (ರೂ.5000/-)**

1. ಆನ್‌ಲೈನ್ ವೆಬಿನಾರ್‌ಗಳು/ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ನೀಡಲು.
2. ಕಸದ ಬುಟ್ಟಿಗಳ ಖರೀದಿ (ಹಸಿರು ಮತ್ತು ನೀಲಿ ಬಣ್ಣ)
3. ಇಕೋಕ್ಲಬ್‌ಗಳಿಗೆ ಪರಿಸರ ಸ್ನೇಹಿ ಬ್ಯಾನರ್ ಖರೀದಿ.
4. ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳ ಖರೀದಿ.
5. ಸ್ವಚ್ಛತಾ/ತೋಟಗಾರಿಕಾ ಸಲಕರಣೆಗಳ ಖರೀದಿ.
6. ಸಸಿಗಳ ಖರೀದಿ.
7. ಪರಿಸರ ಸಂಬಂಧಿ ಪೋಸ್ಟರ್‌ಗಳ ಖರೀದಿ ಅಥವಾ ಮುದ್ರಣ.
8. ಚಿತ್ರಕಲೆ, ಪ್ರಬಂಧ ರಚನೆ, ಭಾಷಣ, ಕಿರುನಾಟಕಗಳು(ಆನ್‌ಲೈನ್ ಮುಖಾಂತರ) ಹಾಗಾ ಬಹುಮಾನ ಖರೀದಿ.
9. ಕಸದಿಂದ ರಸ(ಕ್ರಾಫ್ಟ್) ತಯಾರಿಕೆ ಹಾಗೂ ಬಹುಮಾನ ಖರೀದಿ.
10. ಕರಪತ್ರ, ಕೈಪಿಡಿಗಳ ಮುದ್ರಣ.
11. ಮುಖಕವಚ(ಮಾ), ಸ್ಯಾನಿಟೈಸರ್ ಖರೀದಿಸಿ ವಿತರಿಸುವುದು.

**ಜಿಲ್ಲಾ ಮಟ್ಟ (ರೂ.25000/-)**

ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ವೆಚ್ಚಗಳಿಗೆ ವಿನಿಯೋಗಿಸಬಹುದಾಗಿದೆ. ಉದಾಹರಣೆಗೆ ಕಛೇರಿಗೆ ಬೇಕಾದ ಲೇಖನ ಸಾಮಗ್ರಿಗಳ ಖರೀದಿ, ಅಂಚೆ ವೆಚ್ಚ ಪಾವತಿ, ಜಿಲ್ಲೆಗಳಲ್ಲಿ ಅತ್ಯುತ್ತಮ ಇಕೋಕ್ಲಬ್‌ಗಳನ್ನು ಆಯ್ಕೆ ಮಾಡಿ ಪ್ರಶಸ್ತಿಯನ್ನು ನೀಡಲು ಅನುದಾನ ಬಳಕೆ ಮಾಡಬಹುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

**ಪ್ರತಿಗಳು ಅಗತ್ಯ ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ ರವರಿಗೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಅಭಿವೃದ್ಧಿ), ಸಾ.ಶಿ.ಇ ರವರಿಗೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪಯೋಜನಾ ಸಮನ್ವಯಾಧಿಕಾರಿಗಳು, ಸ.ಶಿ.ಕ ರವರಿಗೆ.

**ಮಾಹಿತಿಗಾಗಿ,**

1. ಮಹಾನಿರ್ದೇಶಕರು, ಹಸಿರು ಭವನ, ದೊರೆಸಾನಿಪಾಳ್ಯ ಕ್ಯಾಂಪಸ್, ವಿನಾಯಕನಗರ ವೃತ್ತ, ಜೆ.ಪಿನಗರ, 5ನೇ ಫೇಸ್, ಬೆಂಗಳೂರು-560078.
2. ಕಛೇರಿ ಪ್ರತಿ.